ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

SJ ಸ್ಥಾಪನೆ : 1948
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 25 ॥ ಸಂಚಿಕೆ : 41 ॥ Udp/1263/2015-17 || R.NO.50495/91 ॥ ತಾರೀಕು : 27–10–2015 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 350/

## ಹುಲಿವೇಷ ಉಳಿಸೋಣ ಬನ್ನಿ



ಕುಂದಾಪುರ ತಾಲ್ಲೂಕಿನಲ್ಲಿ ಸುಮಾರು 300 ವರ್ಷಗಳಿಂದ ಪಾರಂಪರಿಕವಾಗಿ ನವರಾತ್ರಿಯಲ್ಲಿ ನಡೆದು ಕೊಂಡುಬರುತ್ತಿದ್ದ ಹುಲಿವೇಷ ತಿರುಗಾಟ ಇತ್ತೀಚಿನ ವರ್ಷಗಳಲ್ಲಿ ಪ್ರೋತ್ಸಾಹದ ಕೊರತೆಯಿಂದ ಹಾಗೂ ಯುವ ಜನರಲ್ಲಿ ಈ ಬಗ್ಗೆ ಸ್ಫೂರ್ತಿ, ಪ್ರೇರಣೆ, ತಿಳುವಳಿಕೆ ನೀಡುವ ಪ್ರಯತ್ನ ಕಡಿಮೆಯಾದುದರಿಂದ ಹುಲಿವೇಷ ಸಂಪ್ರದಾಯವೇ ನಿಂತು ಹೋಗುವ ಪರಿಸ್ಥಿತಿ ಬಂದಿದೆ. ದೇವಾಡಿಗರ ಸಮುದಾಯವೇ ಕಳೆದ ಸುಮಾರು 100 ವರ್ಷಗಳಿಂದ ಹುಲಿಯ ಬಣ್ಣವನ್ನೇ ಹೋಲುವ ಪೇಂಟ್ ಕಲಾಕೃತಿ ದೇಹದ ಮೇಲೆ ರೂಪಿಸಿಕೊಳ್ಳುವ ಮೂಲಕ ಹಾಗೂ ಸಂಪ್ರದಾಯಬದ್ಧ ಹುಲಿಕುಣಿತದ ಮೂಲಕ ಜನರನ್ನು ರಂಜಿಸುತ್ತಿದ್ದರು. ಹರಕೆಯ ಮಾದರಿಯಲ್ಲಿ ಹಾಗೂ ದೇವರ ಸೇವೆ ಎಂಬಂತೆ ಈ ಪ್ರಾಕಾರ ನಡೆದುಕೊಂಡು ಬರುತ್ತಿತ್ತು. ಆದರೆ ಒಂದೆರಡು ಕುಟುಂಬ ಹೊರತು ಪಡಿಸಿದರೆ ನಾನಾ ಕಾರಣಗಳಿಂದ ದೇವಾಡಿಗರ ಸಮುದಾಯವಾಗಲಿ ಅಥವಾ ಇತರ ಸಮುದಾಯದವರಾಗಲಿ ಈ ಪರಂಪರೆ ಮುಂದುವರಿಸಿಕೊಂಡು ಬರುವ ಆಸಕ್ತಿ ತೋರಿಸುತ್ತಿಲ್ಲವಾದುದರಿಂದ ಹುಲಿವೇಷ ಸಂಪ್ರದಾಯ ಉಳಿಸಲು ಕುಂದಾಪುರದ ಕಲಾಕ್ಷೇತ್ರ ತಂಡ ಕಳೆದೆರಡು ವರ್ಷಗಳಿಂದ ಪ್ರಯತ್ನ ನಡೆಸುತ್ತಿದೆ. ಕುಂದಾಪುರದ ಎ.ಪಿ.ಎಂ.ಸಿ ಮಾಜಿ ಅಧ್ಯಕ್ಷ ಕಿಶೋರ್ ಕುಮಾರ್ ನೇತ್ರತ್ವದಲ್ಲಿ ಪ್ರವೀಣ್ ಕುಮಾರ್, ಎಚ್.ಎಸ್.ಹತ್ವಾರ್, ಗೋಪಾಲ, ನಾರಾಯಣ ಐತಾಳ್, ರಾಮಕೃಷ್ಣ ಹೇರ್ಳೆ, ಶಿವಾನಂದ ಮೆಂಡನ್, ರಾಜೇಶ್ ಕಾವೇರಿ, ರವಿರಾಜ್ ಖಾರ್ವಿ, ಮುಂತಾದವರು ಸೇರಿಕೊಂಡು ಕುಂದಾಪುರದ ಸ.ಪ.ಪೂ.ಕಾಲೇಜಿನ ವಠಾರದಲ್ಲಿ ಗ್ಯಾಸ್‌ಲೈಟ್ ಬೆಳಕಿನಲ್ಲಿ ಹುಲಿವೇಷ ಕುಣಿತದ ಪ್ರದರ್ಶನ ಏರ್ಪಡಿಸುವ ಮೂಲಕ ಸಾರ್ವಜನಿಕರಲ್ಲಿ ಈ ಬಗ್ಗೆ ಆಸಕ್ತಿ ಮೂಡುವಂತೆ ಮಾಡಿದರು.

## ನದಿ ತೀರದಲ್ಲಿ ಬಿಗಡಾಯಿಸುತ್ತಿರುವ ಮರಳುಗಾರಿಕೆ ಸಮಸ್ಯೆ

ಕರಾವಳಿ ತೀರ ಪ್ರಶಾಂತವಾಗಿದ್ದು ಅಲ್ಲಿ ಬದುಕಿರುವ ಕುಟುಂಬಗಳು ಕಷ್ಟವೋ ನಷ್ಟವೋ ಸುಖದಿಂದ ಸಂತೋಷದಿಂದ ಬದುಕುತ್ತಿದ್ದರು. ಹಣ ಎಲ್ಲಿ ಹರಿಯುತ್ತದೆಯೋ ಅಲ್ಲಿ ಸಮಸ್ಯೆಯು ಅಷ್ಟೇ ಹರಿಯುತ್ತದೆ ಎಂಬಂತೆ ನದಿ ನೀರಿನ ಮರಳಿಗೆ ಅಗತ್ಯಕ್ಕಿಂತ ಅಧಿಕ ಬೇಡಿಕೆ ಬಂದು ಇಂದು ನದಿ ತೀರದಲ್ಲಿ ವಾಸಿಸುವವರ ಪರಿಸ್ಥಿತಿ ಅಶಾಂತಿಯದ್ದಾಗಿದೆ.

ಈ ಹಿಂದೆ ಊರಿನವರೊಳಗೆ ಏನಾದರು ಸಮಸ್ಯೆ ಉದ್ಭವಿಸಿದಾಗ ಜಗಳ, ಆಮೇಲೆ ಪರಸ್ಪರ ಒಮ್ಮತ ಹೀಗೆ ಜೀವನ ನಡೆಯುತ್ತಿತ್ತು ಆದರೆ ಇಂದು ನದಿ ತೀರವನ್ನು ಮರಳುಗಾರಿಕೆ ಕಾರಣಕ್ಕಾಗಿ ಬೇರೆ ರಾಜ್ಯದ ಕಾರ್ಮಿಕರು ಆವರಿಸಿಬಿಟ್ಟಿದ್ದಾರೆ. ನದಿ ತೀರಕ್ಕೆ ಆಗಮಿಸುವವರು ಯಾವ ಉದ್ದೇಶಕ್ಕೆ ಆಗಮಿಸುತ್ತಿದ್ದಾರೆ ಎಂದು ತಿಳಿಯದ ಪರಿಸ್ಥಿತಿ ಸ್ಥಳೀಯರದ್ದಾಗಿದೆ. ಸಂಜೆ ಆಗುತ್ತಿದ್ದಂತೆ ಕೆಲವು ಹೊರ ರಾಜ್ಯದ ಕಾರ್ಮಿಕರು ಬಹಳ ಕೆಟ್ಟದಾಗಿ ಸ್ಥಳೀಯರೊಂದಿಗೆ ನಡೆದು ಕೊಳ್ಳುತ್ತಿದ್ದಾರೆಂಬ ಆರೋಪಗಳು ಇವೆ.

ಒಂದೆಡೆ ನದಿ ತೀರದಲ್ಲಿ ಮರಳುಗಾರಿಕೆಯಿಂದ ಮನೆ ಮತ್ತು ಕಟ್ಟಡಗಳಿಗೆ ಸೇತುವೆಗಳಿಗೆ ಅಪಾಯವಾಗುವ ಭಯವಾದರೆ ಇನ್ನೊಂದೆಡೆ ರಸ್ತೆಯೆಲ್ಲ ಮರಳು ತುಂಬಿದ ಲಾರಿಗಳಿಂದ ಹಾಳಾಗಿ ಹೋಗಿದೆ. ಊರಿನವರಿಗೆ ಏನೂ ಪ್ರಯೋಜನವಿಲ್ಲದ ಈ ಉದ್ಯಮದಿಂದ ಆಗುವ ಸಮಸ್ಯೆಯನ್ನು ಅಧಿಕಾರಿಗಳು ಮತ್ತು ಜನನಾಯಕರು ಪರಿಹರಿಸುತ್ತಿಲ್ಲ ಎಂಬ ಕೋಪ ಸ್ಥಳೀಯರಲ್ಲಿ ತುಂಬಿದೆ.

## ಡಾ| ಕನರಾಡಿ ವಾದಿರಾಜ ಭಟರಿಗೆ ತುಳು ಅಕಾಡೆಮಿ ಗೌರವ ಪ್ರಶಸ್ತಿ



ಕನ್ನಡ ಹಾಗೂ ತುಳು ಸಾಹಿತ್ಯ ಜಾನಪದ ಸಂಶೋಧನೆಯಲ್ಲಿ ಸಾಕಷ್ಟು ಕೃಷಿ ಮಾಡಿರುವ ಕನರಾಡಿ ವಾದಿರಾಜ್ ಭಟ್ ಅವರನ್ನು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಈ ಬಾರಿಯ ಗೌರವ ಪ್ರಶಸ್ತಿಗೆ ಆಯ್ಕೆ ಮಾಡಿದೆ. ಕನರಾಡಿ ವಾದಿರಾಜ ಭಟ್ ಅವರು ತುಳುವಿನಲ್ಲೂ ಸಾಕಷ್ಟು ಕೃತಿ ರಚಿಸಿದ್ದಾರೆ.

BEST WISHES To *I. M. A.* KUNDAPURA





Dr.Bhavani R.Rao
President

Dr.Shridevi Katte
Secretary



and New Officebeareres 2015-16 Of IMA Kundapura



Wish You All the Best

Meditek India, Mangalore